ಆದರೂ ರಾತ್ರಿ ಇಡೀ ಕಾಯುತ್ತಾ ಕೂರುವುದು ಬೇಜಾರಿನ ಕೆಲಸ ಎನಿಸತೊಡಗಿತು. ನನ್ನ ಗಡಿಯಾರದ ನಿಮಿಷದ ಮುಳ್ಳು ಮಧ್ಯರಾತ್ರಿಗೆ ಹೊರಳುವುದನ್ನೇ ಎದುರುನೋಡುತ್ತಾ ಕುಳಿತುಕೊಂಡೆ.

ಅಷ್ಟರಲ್ಲಿ ಎದುರಿನ ಮೂಲೆಯಲ್ಲೇನೋ ಜರುಗಿತು. ಅಲ್ಲಿ ಮೇಣದ ಬತ್ತಿ ನಂದಿ ಹೋಗಿದ್ದನ್ನು ನಾನು ಗಮನಿಸಲೇ ಇಲ್ಲ. ಹಠಾತ್ತಾಗಿ ಅಲ್ಲಿ ಕತ್ತಲೆಯಷ್ಟೇ ನನಗೆ ಕಂಡಿದ್ದು. ಯಾರೋ ಅಪರಿಚಿತನೊಬ್ಬ ಧುತ್ತನೆ ಬಂದು ಎದುರಿಗೆ ನಿಂತಂತೆ!

''ದೇವರೇ!'' ಅಪ್ರಜ್ಞಾಪೂರ್ವಕವಾಗಿ ಕೊಂಚ ದೊಡ್ಡದಾಗಿಯೇ ನಾನು ಉದ್ಗರಿಸಿದೆ. ಗಾಳಿ ಕೊಂಚ ಜೋರೇ ಇರಬೇಕೇನೋ? ಎಂದು ಬೆಂಕಿ ಪೊಟ್ಟಣವನ್ನು ಎತ್ತಿಕೊಂಡು ನಿಂತುಕೊಂಡೆ. ಸಾವಕಾಶವಾಗಿ ನಡೆದು ನಂದಿ ಹೋಗಿದ್ದ ಮೇಣದ ಬತ್ತಿಯನ್ನು ಹೊತ್ತಿಸಲು ಕಡ್ಡಿಯನ್ನು ಗೀರಿದೆ. ಮೊದಲನೆ ಕಡ್ಡಿ ಉರಿಯಲಿಲ್ಲ. ಎರಡನೇ ಪ್ರಯತ್ನದಲ್ಲಿ ಬತ್ತಿ ಹೊತ್ತಿಕೊಂಡಿತು. ನಾನು ನೆಟ್ಟಗೆ ನಿಲ್ಲುವಷ್ಟರಲ್ಲಿ ಎದುರು ಗೋಡೆಯ ಪಕ್ಕದಲ್ಲಿ ಏನೋ ಮಿನುಗಿದಂತಾಯಿತು. ನೋಡನೋಡುತ್ತಿದ್ದಂತೆ ಬೆಂಕಿಗೂಡಿನ ಬಳಿ ಇದ್ದ ಮೇಜಿನ ಮೇಲೆ ಉರಿಯುತ್ತಿದ್ದ ಎರಡೂ ಮೇಣದ ಬತ್ತಿಗಳು ನಂದಿ ಹೋದವು.

ನಾನು ಆಶ್ಚರ್ಯಗೊಂಡು ಬೆಂಕಿಯ ಗೂಡಿನ ಕಡೆಗೆ ನಡೆದೆ. ನಂದಿ ಹೋಗಿದ್ದ ಒಂದು ಮೇಣದ ಬತ್ತಿಯನ್ನು ಹೊತ್ತಿಸುತ್ತಿರುವಂತೆಯೇ ಕನ್ನಡಿಯ ಬಳಿ ಇದ್ದ ದೀಪದ ಹಿಡಿಕೆಯಲ್ಲಿದ್ದ ಒಂದು ಬತ್ತಿ ನಂದಿ ಹೋಯಿತು. ನೋಡುತ್ತಿದ್ದಂತೆಯೇ ಅದರ ಸಂಗಾತಿ ಬತ್ತಿಯೂ ನಂದಿ ಹೋಯಿತು. ಸಹಜವಾಗಿ ಗಾಳಿಗೆ ಆರಿದ ಬತ್ತಿ ಕೆಲ ಹೊತ್ತು ಹೊಗೆಯಾಡುತ್ತಿದ್ದು ಬೆಂಕಿಯ ಮಂದ ಜ್ವಾಲೆ ಕಾಣಿಸಿಕೊಳ್ಳಬೇಕಿತ್ತು. ಆದರೆ, ಈ ಬತ್ತಿಗಳನ್ನು ಯಾರೋ ಅದೃಶ್ಯ ವ್ಯಕ್ತಿ ಬೆರಳುಗಳಿಂದ ಹೊಸಕಿ ನಂದಿಸುತ್ತಿರುವಂತೆ ಕಂಡು ಬರುತ್ತಿತ್ತು. ಏನಾಗುತ್ತಿದೆ ಎಂದು ಆಶ್ಚರ್ಯಪಡುತ್ತಿರುವಾಗಲೇ ಮಂಚದ ಕಾಲಬುಡದಲ್ಲಿ ಉರಿಯುತ್ತಿದ್ದ ಬತ್ತಿ ನಂದಿ ಹೋಗಿ ಚಿತ್ರ ವಿಚಿತ್ರ ದೈತ್ಯ ನೆರಳುಗಳು ನನ್ನೆಡೆಗೆ ಕೈಚಾಚುತ್ತಿರುವಂತೆ ಭಾಸವಾಗತೊಡಗಿತು.

''ಏನಾಗುತ್ತಿದೆ ಇಲ್ಲಿ?'' ನನ್ನ ಬಾಯೊಳಗಿನ ಪಸೆ ಆರತೊಡಗಿತು. ಕೆಂಪು ಕೋಣೆಯಲ್ಲಿ ಉರಿಯುತ್ತಿದ್ದ ಒಂದೊಂದೇ ಮೇಣದ ಬತ್ತಿಗಳು ಆರತೊಡಗಿದವು.

''ಹೇಯ್, ಯಾರು ನೀನು?'' ನಾನು ಗಟ್ಟಿಯಾಗಿ ಕಂಪಿಸುತ್ತಾ ಚೀರಿದೆ. ಅಳಿದುಳಿದ ಮೇಣದ ಬತ್ತಿಗಳೂ ಆರತೊಡಗಿದವು.

ಬೀರುವಿನ ಮೇಲಿನ ಮೇಣದ ಬತ್ತಿಗಳು ಉರಿಯಲೇ ಬೇಕಿತ್ತು. ನಾನು ಏದುಸಿರು ಬಿಡುತ್ತಾ ಬೀರುವಿನ ಬಳಿಗೆ ಸಾಗಿದೆ. ಬೆಂಕಿಪೊಟ್ಟಣದಿಂದ ಕಡ್ಡಿಯನ್ನು ಸೆಳೆದು ಗೀರತೊಡಗಿದೆ. ನನ್ನ ಕೈ ಎಷ್ಟೊಂದು ಅದುರುತ್ತಿತ್ತೆಂದರೆ ಬೆಂಕಿ ಕಡ್ಡಿ ಮದ್ದಿಗೆ ತಾಕುತ್ತಲೇ ಇರಲಿಲ್ಲ. ಕೊನೆಗೂ ಕಡ್ಡಿ ಹೊತ್ತಿಕೊಂಡು ಬತ್ತಿಗಳು ಉರಿಯಲಾರಂಭಿಸಿದಾಗ ನೆಲದ ಮೇಲಿದ್ದ ಬತ್ತಿಗಳು ಆರತೊಡಗಿದವು. ಛಲಕ್ಕೆ ಬಿದ್ದವನಂತೆ ಮತ್ತೆಮತ್ತೆ ನಂದಿ ಹೋಗುತ್ತಿದ್ದ ಬತ್ತಿಗಳನ್ನು ಹೊತ್ತಿಸತೊಡಗಿದೆ. ಹೊತ್ತಿಸಿದಂತೆಯೇ ಅವೂ ಕೂಡ ಆರತೊಡಗಿದವು!

ನಾನು ಹುಚ್ಚನಂತೆ ಓಡಾಡುತ್ತಾ ನಂದಿಹೋಗುತ್ತಿದ್ದ ಮೇಣದ ಬತ್ತಿಗಳನ್ನು ಹೊತ್ತಿಸತೊಡಗಿದೆ. ಗಾಬರಿಯಲ್ಲಿ ಕಡ್ಡಿಗಳು ಉರಿಯದೆ ಮುರಿದು ಬೀಳುತ್ತಿದ್ದವು. ಇದರ ರಗಳೆಯೇ ಬೇಡವೆಂದು ಉರಿಯುತ್ತಿದ್ದ ಒಂದು ಮೇಣದ ಬತ್ತಿಯನ್ನು ಕೈಗೆತ್ತಿಕೊಂಡು ಅದರಿಂದಲೇ ನಂದಿಹೋಗಿದ್ದ ಬತ್ತಿಗಳನ್ನು ಉರಿಸತೊಡಗಿದೆ. ಬತ್ತಿಗಳನ್ನು ನಂದಿಸುತ್ತಿದ್ದ ಆ ಅದೃಶ್ಯ ಕೈಗಳಿಗೆ ನಾನು ಸಾಟಿಯಾಗಲು ಸಾಧ್ಯವೇ ಇರಲಿಲ್ಲ. ಕೆಂಪು ಕೋಣೆಯಲ್ಲಿ ಅಂಧಕಾರ ಏರುತ್ತಿದ್ದಂತೆಯೇ ನನ್ನೊಳಗಿನ ಆತಂಕವೂ